ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 2011–12ನೇ ಸಾಲಿನಲ್ಲಿ ಬೀದರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ವಿಶೇಷ ಪ್ಯಾಕೇಜ್ ಎಂದು ಘೋಷಿಸಿ ಯಾವುದೇ ಅನುದಾನ ನೀಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಯಶಸ್ವಿನಿ ಯೋಜನೆ

945 (653) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) : ಮಾನ್ಯ ಸಹಕಾರ ಮಾರುಕಟ್ಟೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಶಸ್ವಿನಿ ಯೋಜನೆಗೆ ನೋಂದಣಿಯಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮತ್ತು ವರ್ಷವಾರು ವಿವರಗಳನ್ನು ನೀಡುವುದು);

ಆ) ಈ ಯೋಜನೆಯಿಂದ ಕಳೆದ ಮೂರು ವರ್ಷಗಳಲ್ಲಿ ಅನುಕೂಲ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮತ್ತು ವರ್ಷವಾರು ವಿವರಗಳನ್ನು ನೀಡುವುದು);

ಇ) ಈ ಯೋಜನೆಗೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ನೀಡುತ್ತಿರುವ ಮೊತ್ತವೆಷ್ಟು; (ತಾಲ್ಲೂಕುವಾರು ಮತ್ತು ವರ್ಷವಾರು ವಿವರಗಳನ್ನು ನೀಡುವುದು);

ಈ) ಯಶಸ್ವಿನಿ ಯೋಜನೆಗಾಗಿ ನೋಂದಣಿಯಾಗಿರುವ ಅರ್ಜಿದಾರರಿಗೆ ಇನ್ನು ಬಾಂಡ್ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಬಾಂಡ್‌ಗಳನ್ನು ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಊ) ಯಶಸ್ವಿನಿ ಯೋಜನೆಗಾಗಿ ಸಂಬಂಧಿಸಿದ ಇಲಾಖೆಗೆ ಅರ್ಜಿಗಳನ್ನು ಸಲ್ಲಿಸಲು ಹೋಗುವ ರೈತರ ಜೊತೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಸರಿಯಾಗಿ ಸ್ಪಂದಿಸದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಲಕ್ಷ್ಮಣ ಸ.ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂದರೆ 2008–09, 2009–10 ಮತ್ತು 2010–11ರಲ್ಲಿ ಯಶಸ್ವಿನಿ ಯೋಜನೆಯ ಡಿಯಲ್ಲಿ ಕ್ರಮವಾಗಿ 98,749–98,514 ಹಾಗೂ 93380 ಫಲಾನುಭವಿಗಳ ನೋಂದಣಿಯಾಗಿರುತ್ತದೆ. (ವರ್ಷ ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ)

ಆ) ಯಶಸ್ವಿನಿ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂದರೆ 2008–09, 2009–10 ಮತ್ತು 2010–11ರಲ್ಲಿ ಅನುಕೂಲ ಪಡೆದ ಫಲಾನುಭವಿಗಳ ಸಂಖ್ಯೆ ಕ್ರಮವಾಗಿ 1089, 648 ಹಾಗೂ ಆಗಿರುತ್ತದೆ. (ವರ್ಷ ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.)

ಇ) ರಾಜ್ಯ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಅಂದರೆ 2008–09, 2009–10 ಮತ್ತು 2010–11ನೇ ಸಾಲಿನಲ್ಲಿ ಒಟ್ಟು ರೂ.90.00 ಕೋಟಿಗಳ ಅನುದಾನವನ್ನು ಯಶಸ್ವಿನಿ ಯೋಜನೆಯ ಅನುಷ್ಠಾನಕ್ಕಾಗಿ ಯಶಸ್ವಿನಿ ಟ್ರಸ್ಟ್‌ಗೆ ನೀಡಿರುತ್ತದೆ.

ಸದರಿ ಮೂರು ವರ್ಷಗಳಲ್ಲಿ ಯಶಸ್ವಿನಿ ಟ್ರಸ್ಟ್ ರಾಜ್ಯದಲ್ಲಿ ಸದಸ್ಯರಿಂದ ಒಟ್ಟು ರೂ.118.14 ಕೋಟಿ ನೋಂದಾವಣೆ ವಂತಿಗೆ ಸಂಗ್ರಹಿಸಿದೆ. ಸರ್ಕಾರದ ಅನುದಾನ ಸೇರಿ ರಾಜ್ಯದಲ್ಲಿ 216062 ಫಲಾನುಭವಿಗಳಿಗೆ ರೂ.173.57 ಕೋಟಿ ವೆಚ್ಚದಲ್ಲಿ ಶಸ್ತ್ರ ಚಿಕಿತ್ಸಾ ಸೌಲಭ್ಯವನ್ನು ನೀಡಲಾಗಿದೆ. (ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಯೋಜನೆಯಡಿಯಲ್ಲಿ ಸದಸ್ಯರ ನೋಂದಾವಣೆ, ವಂತಿಗೆ ಸಂಗ್ರಹಣೆ, ಸರ್ಕಾರದ ಅನುದಾನ ಹಾಗೂ ವೆಚ್ಚದ ವಿವರಗಳನ್ನು ಅನುಬಂಧ–3 ರಲ್ಲಿ

ನೀಡಲಾಗಿದೆ.) ಯಶಸ್ವಿನಿ ಯೋಜನೆಯಡಿಯಲ್ಲಿ ಅನುದಾನವನ್ನು ತಾಲ್ಲೂಕುವಾರು ನೀಡುವ ಪದ್ಧತಿ ಇರುವುದಿಲ್ಲ.

ಈ) ಯಶಸ್ವಿನಿ ಯೋಜನೆಯಡಿಯಲ್ಲಿ ನೋಂದಾಯಿಸಿರುವ ಅರ್ಜಿದಾರರಿಗೆ ಬಾಂಡ್ ನೀಡುವ ಪದ್ಧತಿ ಇರುವುದಿಲ್ಲ. (ವಿವರಣೆಯನ್ನು ಅನುಬಂಧ-4 ರಲ್ಲಿ ನೀಡಲಾಗಿದೆ)

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಗಮನಕ್ಕೆ ಬಂದಿರುವುದಿಲ್ಲ.

ಋ) ಅನ್ವಯಿಸುವುದಿಲ್ಲ.

ಅನುಬಂಧ –1

ಬೀದರ್ ಜಿಲ್ಲೆಯಲ್ಲಿ 2008-09,2009-10 ಮತ್ತು 2010-11ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆ ಯಡಿಯಲ್ಲಿ ನೋಂದಾಯಿಸಿದ ಫಲಾನುಭವಿಗಳ ಹಾಗೂ ಸದಸ್ಯರಿಂದ ಸಂಗ್ರಹಿಸಿದ ವಂತಿಗೆ ವಿವರ:

(ರೂ.ಲಕ್ಷಗಳಲ್ಲಿ)

ಕ್ರಸಂ	ತಾಲ್ಲೂಕು	ಸದಸ್ಯರ ಸಂಖ್ಯೆ	ಸಂಗ್ರಹಿಸಿದ ವಂತಿಗೆ	ಸದಸ್ಯರ ಸಂಖ್ಯೆ	ಸಂಗ್ರಹಿಸಿದ ವಂತಿಗೆ	ಸದಸ್ಯರ ಸಂಖ್ಯೆ	ಸಂಗ್ರಹಿಸಿದ ವಂತಿಗೆ
		2008-09		2009-10		2010-11	
1	ಔರಾದ	17650	21.18	19262	26.97	18740	26.24
2	ಬಸವಕಲ್ಯಾಣ	17299	20.76	18725	26.21	18028	27.24
3	ಭಾಲ್ಕಿ	18253	21.90	23505	32.91	20503	28.70
4	ಬೀದರ್	24645	29.53	18792	26.31	18020	25.23
5	ಹುಮನಾಬಾದ್	20902	25.08	18230	25.52	18089	25.32
	ಒಟ್ಟು	98749	118.45	98514	137.92	93380	132.73

ಅನುಬಂಧ – 2

ಬೀದರ್ ಜಿಲ್ಲೆಯಲ್ಲಿ 2008-09, 2009-10 ಮತ್ತು 2010-11ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ಶಸ್ತ್ರ ಚಿಕಿತ್ಸೆ ಪಡೆದ ಫಲಾನುಭವಿಗಳು ಹಾಗೂ ಭರಿಸಿದ ವೆಚ್ಚದ ವಿವರ:

(ರೂ.ಲಕ್ಷಗಳಲ್ಲಿ)

ಕ್ರಸಂ	ತಾಲ್ಲೂಕು	ಸಂಖ್ಯೆ	ಶಸ್ತ್ರ ಚಿಕಿತ್ಸಾ ವೆಚ್ಚ	ಸಂಖ್ಯೆ	ಶಸ್ತ್ರ ಚಿಕಿತ್ಸಾ ವೆಚ್ಚ	ಸಂಖ್ಯೆ	ಶಸ್ತ್ರ ಚಿಕಿತ್ಸಾ ವೆಚ್ಚ
		2008-09		2009-10		2010-11	
1	ಔರಾದ	116	12.21	74	6.41	86	9.62
2	ಬಸವಕಲ್ಯಾಣ	141	13.88	78	9.52	80	10.71
3	ಭಾಲ್ಕಿ	226	24.12	138	13.71	151	15.02
4	ಬೀದರ್	275	25.75	165	20.04	172	16.87
5	ಹುಮನಾಬಾದ್	331	29.78	193	18.48	159	13.13
	ಒಟ್ಟು	1089	105.74	648	68.17	648	65.35

ಅನುಬಂಧ – 3

ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯಡಿಯಲ್ಲಿ ರಾಜ್ಯದಲ್ಲಿ 2008–09, 2009–10 ಮತ್ತು 2010–11ರ ಅವಧಿಯಲ್ಲಿ ಸದಸ್ಯರ ನೋಂದಾವಣೆ, ಸಂಗ್ರಹಿಸಿದ ವಂತಿಗೆ ಹಣ, ಸರ್ಕಾರದ ಸಹಾಯ ಧನ, ಉಚಿತ ಹೊರರೋಗ ಚಿಕಿತ್ಸೆ ಪಡೆದವರು, ಶಸ್ತ್ರ ಚಿಕಿತ್ಸೆ ಪಡೆದವರ ಸಂಖ್ಯೆ ಮತ್ತು ವೆಚ್ಚದ ವಿವರ ಈ ಕೆಳಗಿನಂತಿದೆ.

ವರ್ಷ	ನೋಂದಾಯಿಸಿದ ಸದಸ್ಯರು (ಲಕ್ಷಗಳಲ್ಲಿ)	ಸಂಗ್ರಹಿಸಿದ ವಂತಿಗೆ ಹಣ (ರೂ.ಕೋಟಿ ಗಳಲ್ಲಿ)	ಸರ್ಕಾರದ ಸಹಾಯ ಧನ (ರೂ.ಕೋಟಿ ಗಳಲ್ಲಿ)	ಶಸ್ತ್ರ ಚಿಕಿತ್ಸೆ ಪಡೆದವರ ಸಂಖ್ಯೆ	ವೆಚ್ಚದ ಮೊತ್ತ (ರೂ.ಕೋಟಿ ಗಳಲ್ಲಿ)	ಉಚಿತ ಹೊರರೋಗ ಚಿಕಿತ್ಸೆ ಪಡೆದವರ ಸಂಖ್ಯೆ
2008–09	30.47	36.10	30.00	75: 3	61.26	191109
2009–10	30.69	41.36	30.00	66796	55.08	134534
2010–11	30.47	40.68	30.00	73.963	57.23	157480
ಒಟ್ಟು	91.63	118.14	90.00	216062	173.57	483123

ಅನುಬಂಧ – 4

ಯಶಸ್ವಿನಿ ಯೋಜನೆಯಡಿಯಲ್ಲಿ ನೋಂದಾಯಿಸಿದವರಿಗೆ ಗುರುತಿನ ಪತ್ರ ನೀಡುವ ಬಗ್ಗೆ

ಯಶಸ್ವಿನಿ ಯೋಜನೆ ಪ್ರಾರಂಭದಿಂದ 2007–08ನೇ ಸಾಲಿನವರೆಗೆ ಫೋಟೋ ಐಡಿ ಕಾರ್ಡುಗಳನ್ನು ನೀಡಲಾಗುತ್ತಿತ್ತು. 2008–09 ರಿಂದ ಯಶಸ್ವಿನಿ ಯೋಜನೆಯಡಿಯಲ್ಲಿ ನೋಂದಾವಣೆಯಾದ ಎಲ್ಲಾ ಪ್ರಧಾನ ಅರ್ಜಿದಾರರಿಗೆ ಯುನಿಕ್ ಐಡಿ ಸಂಖ್ಯೆಯನ್ನು ನೀಡಲಾಗುತ್ತದೆ ಹಾಗೂ ಪ್ರಧಾನ ಅರ್ಜಿದಾರರ ಮತ್ತು ಅವರ ಕುಟುಂಬದ ಸದಸ್ಯರ ಫೋಟೋ ಸಹಿತ ವೈಯಕ್ತಿಕ ವಿವರದ ಮಾಹಿತಿಯನ್ನು www.yeshasvini.kar.nic.in ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.

ಸದಸ್ಯರ ನೋಂದಾವಣೆ ಅರ್ಜಿಯ ಇನ್ನೊಂದು ಭಾಗವನ್ನು (ಸದಸ್ಯರ ಉಪಯೋಗಕ್ಕಾಗಿ) ಅರ್ಜಿದಾರರಿಗೆ ನೀಡಲಾಗುತ್ತಿದ್ದು, ಈ ಅರ್ಜಿ ಭಾಗದಲ್ಲಿ ಯೋಜನೆಯಡಿಯಲ್ಲಿ ನೋಂದಾಯಿಸಿದ ಪ್ರಧಾನ ಅರ್ಜಿದಾರರ ಯೂನಿಕ್ ಐಡಿ ಸಂಖ್ಯೆಯು ನಮೂದಾಗಿರುತ್ತದೆ ಹಾಗೂ ಅರ್ಜಿದಾರರ ಕುಟುಂಬದ ಸದಸ್ಯರ ವೈಯಕ್ತಿಕ ವಿವರದ ದಾಖಲೆ ಕೂಡ ಇರುತ್ತದೆ. ಅರ್ಜಿದಾರರು ಯೋಜನೆಯ ಸೌಲಭ್ಯ ಪಡೆಯಲು ಪ್ರತಿವರ್ಷ ವಂತಿಗೆ

ಪಾವತಿಸಿ ಸದಸ್ಯತ್ವವನ್ನು ನವೀಕರಿಸಬೇಕು. 2010–11ನೇ ಸಾಲಿನಲ್ಲಿ ಹೊಸದಾಗಿ ನೋಂದಾವಣೆಯಾದ, ಸೇರ್ಪಡೆಯಾದ ಮತ್ತು ನವೀಕರಣ ಗೊಳಿಸಿದ ಸದಸ್ಯರ ಮಾಹಿತಿಯನ್ನು ಕೂಡ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.

ಅರ್ಜಿದಾರರು ಟ್ರಸ್ಟ್ ಗುರುತಿಸಲ್ಪಟ್ಟಿರುವ ಆಸ್ಪತ್ರೆಗಳಲ್ಲಿ ಈ ಮೇಲಿನ ದಾಖಲಾತಿಯನ್ನು ಹಾಗೂ ಪ್ರತಿವರ್ಷ ನೋಂದಾವಣೆ/ನವೀಕರಣ ಬಗ್ಗೆ ಅವರ ಪಾಲಿನ ವಂತಿಗೆ ಹಣ ಪಾವತಿಸಿದ ರಶೀದಿ ತೋರಿಸಿ ಶಸ್ತ್ರ ಚಿಕಿತ್ಸಾ ಸೌಲಭ್ಯವನ್ನು ಪಡೆಯಬಹುದು.

ವಿಶೇಷ ಪ್ಯಾಕೇಜ್ ನೀಡುವುದು

946 (917) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟದಲ್ಲಿ ಬೆಳೆಯುವ ಈರುಳ್ಳಿಯು ದೇಶದಲ್ಲಿ ಮನೆಮಾತಾಗಿದ್ದು, ಈ ಈರುಳ್ಳಿಯನ್ನು ಹೆಚ್ಚಿನ ರೀತಿಯಲ್ಲಿ ಬೆಳೆಯಲು ಸರ್ಕಾರ ಅನುದಾನದ ಮೂಲಕ ವಿಶೇಷ ಪ್ಯಾಕೇಜ್‌ನ್ನು ನೀಡಲು ಚಿಂತನೆ ನಡೆಸಿದೆಯೇ;

ಆ) ಇಲ್ಲವಾದಲ್ಲಿ, ಇದಕ್ಕೆ ಕಾರಣಗಳೇನು?

ಶ್ರೀ ಎಸ್.ಎಂ. ರವೀಂದ್ರನಾಥ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :

ಅ) ಕುಮಟದಲ್ಲಿ ಬೆಳೆಯುವ ಈರುಳ್ಳಿಯನ್ನು ಹೆಚ್ಚಿನ ರೀತಿಯಲ್ಲಿ ಬೆಳೆಯಲು ಸರ್ಕಾರ ಅನುದಾನದ ಮೂಲಕ ವಿಶೇಷ ಪ್ಯಾಕೇಜ್‌ನ್ನು ನೀಡಲು ಚಿಂತನೆ ನಡೆಸಿರುವುದಿಲ್ಲ.

Providing special package to the onion grown in kumata to promote its cultivations is not under governments consideration.

ಆ) ರಾಜ್ಯದಲ್ಲಿ ಬೆಳೆಯುವ ಈರುಳ್ಳಿಯನ್ನು ಹೆಚ್ಚಿನ ರೀತಿಯಲ್ಲಿ ಬೆಳೆಸಲು ಕುಮುಟದಲ್ಲಿ ಬೆಳೆಯುವ ಈರುಳ್ಳಿ ಸೇರಿದಂತೆ, ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.